# ಹೊಟ್ಟೆಬಾಕ ಪ್ರವೃತ್ತಿ

ಊಟ ಮಾಡುವುದು ಕೂಡ ಒಂದು ಕಲೆ. ಕೇವಲ ಹೊಟ್ಟೆ ತುಂಬಿಸಿಕೊಳ್ಳುವ ಅಥವಾ ಹಸಿವು ನೀಗಿಸಿಕೊಳ್ಳುವ ಕ್ರಿಯೆಯಾಗಿ ಅದು ಇರಬಾರದು. ಹಸಿವು ಮನುಷ್ಯನ ಮೂಲಭೂತ ಪ್ರವೃತ್ತಿಗಳಲ್ಲೊಂದು, ನಿಜ. ಅದು ಪೂರೈಕೆಯಾಗಿ ತಣಿದಾಗ ಮಾತ್ರ ಮಿಕ್ಕ ಇಂದ್ರಿಯಗಳು ಸರಿಯಾಗಿ ಕೆಲಸ ಮಾಡುತ್ತವೆ; ಬುದ್ಧಿ ಮನಸ್ಸುಗಳು ವಿವೇಕದಿಂದ ವರ್ತಿಸುತ್ತವೆ. ದೈಹಿಕವಾಗಿ ಆರೋಗ್ಯವಾಗಿರಲು ಸಾಧ್ಯವೂ ಆಗುತ್ತದೆ. ಹಾಗಂತ ನೋಡುವವರು ಮುಜಗರಕ್ಕೊಳಗಾಗುವಂತೆ ಅಥವಾ ಅಸಹ್ಯಪಟ್ಟುಕೊಳ್ಳುವಂತೆ ನಮ್ಮ ಭೋಜನ ಕ್ರಿಯೆ ಸಾಗಬಾರದು. ಅದು ಬಕಾಸುರನಂತೆ ಎಷ್ಟು ತಿಂದರೂ ಸಾಕಾಗದ ಪ್ರವೃತ್ತಿಯಾಗಬಾರದು. ಅವನು ತನಗಾಗಿ ಬಂದ ಬಂಡಿ ಬಂಡಿ ಭಕ್ಷ್ಯ ಭೋಜ್ಯವನ್ನು ನಿಧಾನವಾಗಿ ಸವಿಯುತ್ತಾ, ಅದನ್ನು ಆನಂದಿಸುತ್ತಾ ತಿನ್ನಲಿಲ್ಲ. ದಾಹದಿಂದ ಮುಕ್ಕಿದನು. ಆ ಮುಕ್ಕುವ ಕ್ರಿಯೆಯಲ್ಲಿ ಆಹಾರ ಅವನ ಮುಖಮೋರೆಯ ಮೇಲೆ, ಅವನ ಎದೆಯ ಮೇಲೆ ಬಿದ್ದು ಚೆಲ್ಲಾಡಿತು. ಅದು ನೋಡುವವರಿಗೆ ಭೀಕರವೂ ಅಸಹ್ಯವೂ ಆಗಿತ್ತು. ಊಟ ಮಾಡುವ ವಿಧಾನ ಅಸಹ್ಯವನ್ನುಂಟು ಮಾಡಬಾರದು. ಅದು ನೋಡುಗರಿಗೆ ಆನಂದವನ್ನು ಬಡಿಸುವವರಿಗೆ ಉತ್ಸಾಹವನ್ನೂ ಉಂಟು ಮಾಡುವಂತಿರಬೇಕು.

ಹಸಿವಾದವರೆಲ್ಲರೂ ತಹ ತಹಿಸಿ ತಿನ್ನುತ್ತಾರೆಂಬುದು ಅತಿಶಯದ ಮಾತು. ಹಾಗೆ ನೋಡಿದರೆ ಸಾಕಷ್ಟು ಹಸಿವಾದಾಗ ಗಬಗಬನೆ ತಿನ್ನಲಾಗುವುದಿಲ್ಲ. ಹಾಗೆ ತಿನ್ನಲು ಯತ್ನಿಸಿದರೆ ಗಂಟಲಿಗೆ ಸಿಕ್ಕಿಕೊಂಡು ಉಸಿರು ಕಟ್ಟಿದಂತಾಗುತ್ತದೆ. ಕೆಲವು ಸಂದರ್ಭದಲ್ಲಿ ಹಾಗೆ ತಿಂದರೆ ಮಾರಣಾಂತಿಕ ಪರಿಣಾಮಗಳುಂಟಾಗಬಹುದು. ಆಗ ನಿಧಾನವಾಗಿ, ತುಸು ತುಸು ತಿಂದರೆ ಸರಾಗವಾಗುತ್ತದೆ. ಆಗ ಚೈತನ್ಯ ಮಾಡಿಸಿಕೊಂಡ ದೇಹವು ತಡವಾಗಿ ಊಟ ಮಾಡಲು ಸಿದ್ಧವಾಗುತ್ತದೆ. ಈ ಪ್ರಕ್ರಿಯೆ ಒಂದೆರಡು ದಿನಗಳಿಗೆ ವಿಸ್ತರಿಸಿದರೂ ಆಶ್ಚರ್ಯವಿಲ್ಲ. ಆದುದರಿಂದ 'ಶತಮಾನಗಳಿಂದ ಹಸಿದವನಂತೆ ಸಿಕ್ಕಿದ್ದನ್ನೆಲ್ಲಾ ಗಬಗಬನೆ ತಿಂದನು' ಎಂದು ಬರೆಯುವ ಮಾತುಗಳ ಬಗ್ಗೆ, ಹಸಿದವರ ತಿನ್ನುವ ದಾಹದ ಬಗ್ಗೆ ಚಲನಚಿತ್ರಗಳಲ್ಲಿ ತೋರಿಸುವ ದೃಶ್ಯಗಳ ಬಗ್ಗೆ ಮರುಚಿಂತನೆ ಮಾಡುವುದು ಒಳಿತು. ಹಸಿದ ಬಡವರ ಬಗ್ಗೆ ಅಗೌರವದ ವರ್ತನೆ ಇದೆಂದು ಭಾವಿಸುವಂತಾಗುತ್ತದೆ.

ಈಗ ಭಾರತದಲ್ಲಿ ದುಡಿದು ತಿನ್ನುವ ಯಾರೂ ಹಸಿವಿನಿಂದ ಬಳಲಬೇಕಿಲ್ಲ. ಕೆಲಸ ಮಾಡಬಯಸುವ ಕೈಗಳಿಗೆ ಕೈತುಂಬ ಕೆಲಸ ಸಿಗುತ್ತದೆ; ಬಾಯ್ತುಂಬ ಎರಡು ಹೊತ್ತು ತಿನ್ನುವಷ್ಟು ಹಣ ದೊರೆಯುತ್ತದೆ. ಒಂದು ದೇಶವೇ ಬರಗಾಲದಿಂದ, ಬಡತನದಿಂದ, ನಾನಾ ಪ್ರಕೃತಿ ವಿಕೋಪಗಳಿಂದ ಅಥವಾ ಆಳುವ ಸರ್ಕಾರಗಳ ಅಕ್ರಮ ಅವ್ಯವಹಾರ ಭ್ರಷ್ಟಾಚಾರಗಳಿಂದ ಹಸಿವಿನಿಂದ ನರಳುವಂತಾಗಬಹುದು. ಆಫ್ರಿಕಾದ ಕೆಲವು ದೇಶಗಳಲ್ಲಿ ಈ ಪರಿಸ್ಥಿತಿಯನ್ನು ಕಂಡಿದ್ದೇವೆ. ಆದರೆ ಇಂದು ಜಗತ್ತು ಸಾಕಷ್ಟು ನಾಗರಿಕವಾಗಿದೆ, ಮಾನವೀಯ ಅಂತಃಕರಣದಿಂದ ನೋವಿಗೆ ಮಿಡಿಯುತ್ತದೆ. ಎಲ್ಲೇ ಪ್ರಕೃತಿ ವಿಕೋಪವಾಗಲೀ, ಬರಗಾಲದಿಂದ ಹಾಹಕಾರ ಉಂಟಾಗಲಿ ಅನ್ನ ಆಹಾರ ಬಟ್ಟೆಗಳ ಮಹಾಪೂರವೇ ಅಲ್ಲಿಗೆ ಹರಿದುಬರುತ್ತದೆ. ಮಾನವೀಯತೆ–ಪ್ರೀತಿಗಳು ಉಸಿರಾಡುತ್ತವೆ. ಈ ಬಗೆಯ ಅನ್ನ ಆಹಾರಗಳ ಅಸಮಾನತೆಗಳು ಎಲ್ಲ ಕಾಲದಲೂ ಎಲ್ಲ ಸಮಾಜಗಳಲ್ಲು ಇದ್ದವು. ಆದರೆ ಆಧುನಿಕ ಜ್ಞಾನ ವಿಜ್ಞಾನಗಳು ಈ ಹಸಿವಿನ ತೀವ್ರತೆಯನ್ನು ಕಡಿಮೆ ಮಾಡುತ್ತವೆ.

'ತಾಯಿ ಮಾಡಿದ ಹೊಟ್ಟೆ, ಊರು ಮಾಡಿದ ಕೊಳಗ' ಎಂಬ ಗಾದೆ ಮಾತಿದೆ. ವ್ಯಕ್ತಿಯಲ್ಲಿ ತಿನ್ನುವ ಪ್ರವೃತ್ತಿಯನ್ನು ಬೆಳೆಸುವಲ್ಲಿ ಮುಖ್ಯ ಪಾತ್ರವಹಿಸುವವಳು ತಾಯಿಯೆಂದಾಯಿತು. ತನ್ನ ಮಗು ಹೊಟ್ಟೆಬಾಕನಾಗಲಿ ಎಂಬ ಉದ್ದೇಶ ಅವಳಿಗೆ ಖಂಡಿತವಿರುವುದಿಲ್ಲ. ತನ್ನ ಮಗು ಚೆನ್ನಾಗಿ ತಿಂದುಂಡು ದಷ್ಟಪುಷ್ಟವಾಗಿ ಆರೋಗ್ಯಕರವಾಗಿ ಬೆಳೆಯಲೆಂಬುದು ಅವಳ ಆಸೆ. ಆ ಕಾರಣದಿಂದ ಅವಳು ಅವನಿಗೆ ಅವನ ಅವಶ್ಯಕತೆಗೆ ಮೀರಿ ತಿನ್ನಿಸತೊಡಗುತ್ತಾಳೆ. ತಿನ್ನುವುದನ್ನು ಅಭ್ಯಾಸ ಮಾಡಿಸುತ್ತಾಳೆ. ತಿನ್ನುವುದು ಅನಂತರ ಅವನಿಗೆ ಗೀಳಾಗಿ ಅಂಟಿಕೊಳ್ಳುತ್ತದೆ. ಜೀವನ ಪರ್ಯಂತ ಮಾಯೆಯಾಗಿ ಕಾಡುತ್ತದೆ. ಅವನು ತಿನ್ನುವ ರೋಗಿಯಾಗುತ್ತಾನೆ; ತಿನ್ನುವ ಭರದಲ್ಲಿ ತನ್ನ ನಾಗರೀಕ ವರ್ತನೆಗಳನ್ನು ಅಲಕ್ಷ್ಯ ಮಾಡುತ್ತಾನೆ. ಅವನಿಗರಿಲ್ಲದಂತೆಯೇ ತನ್ನ ಹೊಟ್ಟೆಯನ್ನು ತೋಳದ ಹೊಟ್ಟೆಯನ್ನಾಗಿಸಿಕೊಳ್ಳುತ್ತಾನೆ. ಜೀವನದ ಪರಮಗುರಿ ತಿನ್ನುವುದೇ ಆಗಿದೆ, 'ಎಲ್ಲಾರು ಮಾಡುವುದು ಗೇಣು ಹೊಟ್ಟೆಗಾಗಿ...' ಎಂಬುದು ಅವನ ಆದರ್ಶವಾಗಿ ಬಿಡುತ್ತದೆ. ಆದರೆ ಆ ಕೀರ್ತನೆಯ ಅಂತ್ಯದಲ್ಲಿ ದಾಸರು ಅಭಿವ್ಯಕ್ತಿಸುವ ಬದುಕಿನ ನಿಜಗುರಿ ಅಗಣ್ಯವಾಗಿಬಿಡುತ್ತದೆ.

ಬದುಕಿನಲ್ಲಿ ಜೀವ ಸಾಗುವ ಪ್ರಕ್ರಿಯೆಗೆ ಆಹಾರ ಬೇಕು. ಬದುಕಿನ ಗುರಿ ತಿನ್ನುವುದಲ್ಲ. ಸಂಕುಲಾಭಿವೃದ್ಧಿ ಮಾಡುವುದು ಮತ್ತು ಆ ಸಂಕುಲದ ನೆಮ್ಮದಿ ಹಾಗೂ ಸುಸಂಸ್ಕೃತಮಯ ಹಾದಿಯನ್ನು ಸುಗಮಗೊಳಿಸಲು ಸೌಮ್ಯ ಸುಖಕರ ವಾತಾವರಣವನ್ನು ರೂಪಿಸುವುದು ಜೀವಿತದ ಗುರಿಯಾಗಬೇಕು. ಅದಕ್ಕಾಗಿ ದುಡಿಯುವ ಜೀವನ ಆರೋಗ್ಯ ಮತ್ತು ಶಕ್ತಿಗೆ ಅವನು ತೆಗೆದುಕೊಳ್ಳುವ ಆಹಾರ ಪೂರಕವಾಗಿ ಕೆಲಸ ಮಾಡುವಂತಿರಬೇಕು.

ವ್ಯಕ್ತಿ ವ್ಯಕ್ತಿಯನ್ನೇ ತಿನ್ನುವಂಥ, ರಾಜ್ಯ ರಾಜ್ಯವನ್ನೇ ತಿನ್ನುವಂಥ, ದೇಶ ಮತ್ತೊಂದು ದೇಶವನ್ನೇ ತಿನ್ನುವಂಥ ಹಾಗೂ ಅಮಾನುಷತ್ವ ಮಾನವತೆಯನ್ನೇ ಕಬಳಿಸುವ ಹೊಟ್ಟೆಬಾಕ ಪ್ರವೃತ್ತಿಯೂ ಇದೆಯೆಂಬುದನ್ನು ಮರೆಯುವಂತಿಲ್ಲ.

■ ಶಿಕಾಕು

## ಮಾತೇ ಮುತ್ತು

★ ಶರೀರದಂತೆ ಬುದ್ಧಿಗೂ ಮುಪ್ಪು ಇರುವುದರಿಂದ ನಿರ್ಣಾಯಕ ಸ್ಥಾನಗಳಲ್ಲಿರುವವರು ಆಜೀವ ಪರ್ಯಂತ ಆಧಿಕಾರದಲ್ಲಿರಬಾರದು.

–ಅರಿಸ್ಟಾಟಲ್

★ ಈ ಪ್ರಪಂಚದಲ್ಲಿ ವಾಸ್ತವವನ್ನು ಎದುರಿಸಲು ಹಿಂಜರಿಯುವವರಿಗೆ ಅಪಾಯ ತಪ್ಪಿದ್ದಲ್ಲ.

–ಬರ್ನಾರ್ಡ್ ಶಾ

★ ಮೆದುಳು ಒಂದು ಹೊಟ್ಟೆಯಿದ್ದಂತೆ ಎಂದು ಭಾವಿಸಿದರೆ, ಅದರೊಳಗೆ ಎಷ್ಟು ತುಂಬುತ್ತೇವೆ ಎಂಬುದು ಮುಖ್ಯವಲ್ಲ. ಅದು ಎಷ್ಟನ್ನು ಜೀರ್ಣಿಸಿಕೊಳ್ಳುತ್ತದೆ ಎಂಬುದು ಮುಖ್ಯ.

–ಗೌರೀಶ ಕಾಯ್ಕಿಣಿ

★ ಕೆಳಗಿನವರ ಮೇಲೆ ಸವಾರಿ ಮಾಡುವವನು ಮೇಲಿನವರ ಕಾಲು ನೆಕ್ಕುತ್ತಾನೆ.

–ಬೀಚಿ

★ ದೊರೆತನಕ್ಕೆ ಎಷ್ಟು ಮಂದಿ ಆಪ್ತರೋ, ಅಷ್ಟೇ ಮಂದಿ ಹಗೆಗಳೂ ಇರುತ್ತಾರೆ.

–ತ.ರಾ.ಸು.

★ ಕುರುಡು ಕಾಂಚಾಣ ಕುಣಿಯುತ್ತಲಿತ್ತೋ, ಕಾಲಿಗೆ ಬಿದ್ದವರ ತುಳಿಯುತಲಿತ್ತೋ.

–ದ.ರಾ.ಬೇಂದ್ರೆ

★ ಮಗನು ಚಿಕ್ಕವನಿದ್ದಾಗ ತಂದೆ ಅವನನ್ನು ಮುದ್ದಿಸಬೇಕು. ಆಮೇಲೆ ಪ್ರೀತಿಯನ್ನು ಮನಸ್ಸಿನಲ್ಲಿರಿಸಿಕೊಳ್ಳಬೇಕು. ರಾಜನು ಪ್ರಜೆಗಳಲ್ಲಿನ ಪ್ರೀತಿಯನ್ನು ಹೊರಗೆ ತೋರಿಸದೆ ಅಡಗಿಸಿಕೊಂಡಂತೆ ಇರಬೇಕು.

–ಹರಿಹರ ಸುಭಾಷಿತ

★ ಭಾರತದಲ್ಲಿ ಜಾತಿ ಮತ್ತು ಅಸ್ಪೃಶ್ಯತೆ ಎರಡೂ ಬಹುದೊಡ್ಡ ಕೆಡಕುಗಳಾಗಿರುತ್ತವೆ. ಜಾತಿ ಸಮಗ್ರ ಹಿಂದೂ ಸಮಾಜವನ್ನು ಅಪಾಂಗಗೊಳಿಸಿರುತ್ತದೆ. ಅಸ್ಪೃಶ್ಯತೆ ಬಹುಸಂಖ್ಯಾ ಜನರನ್ನು ಹತ್ತಿಕ್ಕಿರುತ್ತದೆ.

–ಬಿ.ಆರ್.ಅಂಬೇಡ್ಕರ್

★ ಅನುಭವವೇ ಮನುಷ್ಯನ ಪಾಠಶಾಲೆ. ಜನರು ಬೇರೆಲ್ಲೂ ಕಲಿಯರು.

–ಎಡ್ಮಂಡ್ ಬರ್ಕ್

★ ಮಹಾಕವಿ ತನ್ನ ಬಗ್ಗೆ ಬರೆಯುತ್ತಲೇ, ತನ್ನ ಕಾಲದ ಬಗ್ಗೆ ಬರೆಯುತ್ತಾನೆ.

–ಟಿ.ಎಸ್.ಎಲಿಯಟ್

★ ಅನುಭವ ಶಾಲೆಯ ಫೀಜು ದುಬಾರಿ. ಆದರೆ ದಡ್ಡರು ಬೇರೆ ಯಾವುದೇ ರೀತಿ ಕಲಿಯುವುದಿಲ್ಲ.

–ಬೆಂಜಮಿನ್ ಫ್ರಾಂಕ್ಲಿನ್

★ ನಮ್ಮ ಮೂಲಭೂತ ಅವಶ್ಯಕತೆಗಳನ್ನೆಲ್ಲ ಇನ್ನೊಬ್ಬರು ಪೂರೈಸಬೇಕೆಂಬ ನಿರೀಕ್ಷೆ ನಿಮ್ಮದಾದರೆ ನಿರಾಶೆಯ ನೋವು ತಪ್ಪಿದ್ದಲ್ಲ.

–ಸ್ಪೆನ್ಸರ್ ಜಾನ್‌ಸನ್

★ ಎಲ್ಲಿ ಆದರ್ಶ ಇದೆಯೋ ಅಲ್ಲಿ ಶಬ್ಧಗಳಲ್ಲ, ಕೃತಿ ಇರಬೇಕು. ಕೃತಿ ಇಲ್ಲದ ಶಬ್ಧಗಳು ಆದರ್ಶವನ್ನು ಕೊಲೆ ಮಾಡುತ್ತವೆ.

–ಪಾಟೀಲ ಪುಟ್ಟಪ್ಪ

★ ಹಗೆತನವ ಒಲ್ಲೆನೆಂದು ನಡೆಯಬಲ್ಲವರನು ಗೆಲುವ ಬಲವಂತರಾರು?

–ತಿರುವಳ್ಳುವರ್